ಮಾಡಬೇಕೆಂದು ಹೇಳುತ್ತಾ ಮತ್ತು ಅಲ್ಲಿನ ಕಾಮಗಾರಿಗಳನ್ನು ಯಾವುದೇ ಉಪವಿಭಾಗದಿಂದ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ತಾವು ಕಛೇರಿಯನ್ನು ಸೋಮವಾರಪೇಟೆಯಲ್ಲಿ ತೆರೆಯುತ್ತೇನೆಂದು ಹೇಳಿರುವುದನ್ನು ನಾನು ಸ್ವಾಗತಿಸುತ್ತೇನೆ. ಇದರ ಜೊತೆಗೆ ಉಪವಿಭಾಗವನ್ನು ಸೋಮವಾರಪೇಟೆಯಲ್ಲಿ ಮತ್ತು ವಿಭಾಗವನ್ನು ಮಡಿಕೇರಿಯಲ್ಲಿ ತೆಗೆದು ವೀರಾಜಪೇಟೆ ಮತ್ತು ಮಡಿಕೇರಿಯ ಉಪವಿಭಾಗದ ಐದು ಕೋಟಿ ರೂಪಾಯಿಗಳ ಕಾಮಗಾರಿಯನ್ನು ಮಾಡಲಿಕ್ಕೆ ಆದ್ಯತೆ ಕೊಡಬೇಕೆಂದು ಹೇಳುತ್ತೇನೆ. ಧನ್ಯವಾದಗಳು.

ಶ್ರೀ ತಿಪ್ಪೇಸ್ವಾಮಿ:- ಮಾನ್ಯ ಸರ್ಕಾರ ಅಭಿಪ್ರಾಯ ಸೂಕ್ತವಾಗಿದೆ. ಅದಕ್ಕೆ ಹೆಚ್ಚಿನ ಗಮನವನ್ನು ಕೊಟ್ಟು ಮಾಡುತ್ತೇನೆ ಎಂದು ಹೇಳುತ್ತೇನೆ.

ಕೊಪ್ಪಳದಲ್ಲಿ ಸಂಚಾರಿ ಪೋಲೀಸ್ ಠಾಣೆ ಪ್ರಾರಂಭ

67(616): ಶ್ರೀ ಕರಡಿ ಸಂಗಣ್ಣ (ಕೊಪ್ಪಳ):

ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಕೊಪ್ಪಳ ನಗರದಲ್ಲಿ ದಿನೇ ದಿನೇ ಸಂಚಾರ ಹೆಚ್ಚುತ್ತಿದ್ದು ಇಲ್ಲಿಗೆ ಸರಕಾರಿ ಆರಕ್ಷಕ ಠಾಣೆಯ ಅವಶ್ಯಕತೆಯ ಬಗ್ಗೆ ಜಿಲ್ಲಾ ಪೋಲೀಸ್ ಅಧಿಕಾರಿಗಳು ಠಾಣೆಯನ್ನು ಮಂಜೂರು ಮಾಡಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿದ್ದರೂ ಸಂಚಾರಿ ಠಾಣೆಯೂ ಈವರೆಗೂ ಮಂಜೂರು ಆಗದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

(ಆ) ಈ ಠಾಣೆಯನ್ನು 1997-98ನೇ ಸಾಲಿಗೆ ಮಂಜೂರು ಮಾಡಿ ಇದೇ ಸಾಲಿಗೆ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಆರ್. ರೋಷನ್ ಬೇಗ್(ಗೃಹ ಮತ್ತು ವಕ್ಫ್ ರಾಜ್ಯ ಸಚಿವರು.)

(ಅ) ಪ್ರಸ್ತಾವನೆ ಇನ್ನೂ ಸರ್ಕಾರಕ್ಕೆ ಸ್ವೀಕೃತವಾಗಿಲ್ಲ.

(ಆ) ಪ್ರಸ್ತಾವನೆ ಬಂದಾಗ ಪರಿಶೀಲಿಸಲಾಗುವುದು.

ಶ್ರೀ ಕರಡಿ ಸಂಗಣ್ಣ:- ಮಾನ್ಯ ಅಧ್ಯಕ್ಷರೇ, ಮಂತ್ರಿಯವರು ಉತ್ತರವನ್ನು ಒದಗಿಸಿದ್ದಾರೆ. ನಾನು ಕಳೆದ ಬಾರಿ ಕೂಡ ಇದೇ ಪ್ರಶ್ನೆಯನ್ನು ಹಾಕಿದ್ದೆ. ಕೊಪ್ಪಳ ನಗರದಲ್ಲಿ ಮುಖ್ಯವಾಗಿ ಹುಬ್ಬಳ್ಳಿ-ರಾಯಚೂರು ರಸ್ತೆಯಾಗಿರುವುದರಿಂದ ದಿನೇ ದಿನೇ ಸಂಚಾರಿ ವ್ಯವಸ್ಥೆ ಹೆಚ್ಚುತ್ತಿರುವುದರಿಂದ ವಾಹನ ಮತ್ತು ಜನಸಂದಣಿ ಹೆಚ್ಚಿದ್ದು ಅಪಘಾತವಾಗುತ್ತಿದ್ದರೂ ಕೂಡ ಸರ್ಕಾರ ಪ್ರಸ್ತಾವನೆ ಇನ್ನೂ ಸರ್ಕಾರಕ್ಕೆ ಸ್ವೀಕೃತವಾಗಿಲ್ಲ ಎಂದು ಉತ್ತರಿಸಿದ್ದಾರೆ.

ಅಧ್ಯಕ್ಷರು:- ಅದು ಇಲಾಖೆಯ ಮುಖಾಂತರ ಬರಬೇಕು.

The anxiety of the Hon'ble Member is, ther is an increased traffic in Koppal Town because of the Hubli-Raichur Road. Hon'ble Minister of State for Home may, get the proposal from the Department and see that it is done.

ಶ್ರೀ ಕರಡಿ ಸಂಗಣ್ಣ:- ಅಲ್ಲಿ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಕೂಡ ಶುರುವಾಗಿದೆ. ಇಲಾಖೆಯಿಂದ ಇನ್ನೂ ಬಂದಿಲ್ಲ ಎಂದು ಹೇಳುತ್ತಾರೆ.

ಅಧ್ಯಕ್ಷರು:- ನನ್ನ ಭಾಷೆ ಇಷ್ಟು ಸರಳವಾಗಿರುತ್ತದೆ. ಪ್ರಪೋಸಲ್ಸ್ ಕಳುಹಿಸಬೇಕಾಗಿರುವುದು ನೀವಲ್ಲ. ನಾನು ಮಾನ್ಯ ಮಂತ್ರಿಗಳಿಗೆ ಸೂಚನೆ ಕೊಡುತ್ತಿದ್ದೇನೆ. ನೀವು ಹೇಳುವುದನ್ನು ನಾನು ಹೇಳಿದ್ದೇನೆ.

ಶ್ರೀ ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೇ, The population of koppal Town is around 45000.

ನಮ್ಮ ಎಸ್‌ಪಿ ಕಡೆಯಿಂದಲೂ ಕೂಡ ಬಂದಿದೆ ಕೊಪ್ಪಳ ಟೌನ್‌ಗೆ ಟ್ರಾಫಿಕ್ ಪೋಲೀಸ್ ಸ್ಟೇಷನ್ ಬೇಕಾಗುತ್ತದೆ ಎಂದು. Though there is no proposal before the Government for opening of a traffic police station at koppal Town ಒಂದು ಲಕ್ಷ ಪಾಪ್ಯುಲೇಷನ್ ಎಲ್ಲೆಲ್ಲಿ ಇದೆ, ಅಲ್ಲಿ ಮಾತ್ರ ಟ್ರಾಫಿಕ್ ಪೋಲೀಸ್ ಸ್ಟೇಷನ್ ಮಾಡಬೇಕೆಂದು ಇದೆ. ಇದರ ಜೊತೆಗೆ ಕೊಪ್ಪಳ ಡಿವಿಜನ್‌ನಲ್ಲಿ ಜನಸಂದಣಿ ಹೆಚ್ಚಿದ್ದು ಆಕ್ಸಿಡೆಂಟ್ಸ್ ಕೂಡ ಜಾಸ್ತಿಯಾಗುತ್ತಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದನ್ನು ನೋಡಿ ಅಲ್ಲಿ ಕೂಡ ಒಂದು ಸ್ಟೇಷನ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ.

ಬೆಂಗಳೂರಿನ ಸೌಂದರ್ಯ ರಕ್ಷಣೆಗೆ ಕೈಗೊಂಡ ಕ್ರಮಗಳು.

68(337) ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ):

ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ರಾಜ್ಯಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ಬೆಂಗಳೂರಿನ ಸೌಂದರ್ಯ ರಕ್ಷಣೆಗೆ ಹಾಗೂ ನೈರ್ಮಲ್ಯ ಕಾಪಾಡಲು ಸರ್ಕಾರವು ಪ್ರತಿ ವರ್ಷ ಎಷ್ಟು ಹಣ ಬಿಡುಗಡೆ ಮಾಡುತ್ತಿದೆ. ಎಷ್ಟು ಹಣ ವೆಚ್ಚವಾಗುತ್ತದೆ:

(ಆ) 1995-96ನೇ ಸಾಲಿನಲ್ಲಿ ಬಾಕಿ ಉಳಿದಿರುವ ಹಣ ಎಷ್ಟು? ಬಾಕಿ ಉಳಿದಿರುವ ಹಣವನ್ನು ಯಾವ ರೀತಿ, ಯಾವ ಯೋಜನೆಗಳಿಗೆ ವೆಚ್ಚ ಮಾಡಲಾಗುವುದು?

ಶ್ರೀ. ಅನಂತನಾಗ್ (ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಸಚಿವರು.)